4

ಒಗ್ಗಟ್ಟಿನ ಕೆಲಸ : ಅತೀತ ಗುರಿಗಳತ್ತ ಸೆಳೆತ

ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ಬಾರಿ ವ್ಯಕ್ತಿ ಜೀವನಪರ್ಯಂತ ಸರ್ಕಾರಿ ಶಿಕ್ಷಕನಾಗಿ ಸೇವೆ ಸಲ್ಲಿಸಿದರೂ ಯಾರೂ ಗುರುತಿಸದೆ, ಗೌರವಿಸದೆ ಅವಗಣನೆಗೆ ಒಳಗಾಗಬಹುದು. ಆದರೆ ಇದೇ ವಾತಾವರಣದಲ್ಲಿಯೇ ಅನೇಕ ಶಿಕ್ಷಕರು 'ಮನ್ನಣೆಯ ದಾಹ'ಕ್ಕೆ ಒಳಗಾಗದೆ ಅಂತರಂಗದ ಕರೆಗೆ ಓಗೊಟ್ಟು ತಮ್ಮ ಶಾಲೆಗೆ ಬರುವ ಅತ್ಯಂತ ಹಿಂದುಳಿದ ಹಿನ್ನೆಲೆಯ ಮಕ್ಕಳನ್ನು ಮೇಲೆತ್ತಲು ಸರ್ವಸ್ವವನ್ನೂ ಧಾರೆಯೆರೆಯುವುದನ್ನು ನಾವು ಕಾಣುತ್ತೇವೆ. ಅನೇಕ ಬಾರಿ ಇಂಥ ಶಿಕ್ಷಕರು ಒಂಟಿಯಾಗಿ ತಮ್ಮ ಶಾಲೆಯಲ್ಲಿ ಏಕಾಂಗಿ ವೀರರಂತೆ ಸೆಣಸಾಡುತ್ತಾರೆ. ಆ ಶಾಲೆಯ ಭವಿಷ್ಯವು ಸಂಪೂರ್ಣವಾಗಿ ಅವರ ಮೇಲೆಯೇ ಅವಲಂಬಿತವಾಗಿರುತ್ತದೆ. ಅತ್ಯುತ್ತಮ ಶಿಕ್ಷಕರ ಒಂದು ತಂಡ ರೂಪುಗೊಂಡಾಗ ಮಾತ್ರ ಒಂದು ಶಾಲೆಯ ಭವಿಷ್ಯ ಸುಭದ್ರವಾಗುತ್ತದೆ. ಹೀಗಾಗಿ ಯಾವುದೇ ಶಾಲೆಯ ಯಶಸ್ಸಿಗೆ ಕೇವಲ ಒಬ್ಬ ಶಿಕ್ಷಕ ಕಾರಣವಲ್ಲ. ಬದಲಿಗೆ ಒಂದು ಮಧುರ, ಗಟ್ಟಿ ಬಾಂಧವ್ಯವಿರುವ ಶಿಕ್ಷಕರ ತಂಡವು ಯಾವುದೇ ಶಾಲೆಯಲ್ಲಿ ಗೋಚರಿಸಿದಾಗ ಅದು ನನ್ನ ಸಂತೋಷವನ್ನು ದ್ವಿಗುಣಗೊಳಿಸುತ್ತದೆ.

ಅನೇಕರು ಸೇರಿ ಒಂದು ಶಾಲೆಯನ್ನು ಏಕೋಭಾವದಿಂದ ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ – ಅಲ್ಲಿ ನನಗೆ ಎಲ್ಲಕ್ಕಿಂತ ಹೆಚ್ಚು ಮಹತ್ವದ್ದೆಂದು ಅನಿಸುವುದು ಅವರು ಹೊಂದಿರುವ ಉನ್ನತ ಗುರಿಗಳಾಗಲಿ, ಎಲ್ಲರೂ ಸಮಾನವಾಗಿ ಶ್ರಮ ವಹಿಸುತ್ತಿದ್ದಾರೆ ಎಂಬುದಾಗಲಿ ಅಲ್ಲ; ಬದಲಾಗಿ ತಮ್ಮಲ್ಲಿ ಪ್ರತಿಯೊಬ್ಬರ ಪ್ರತಿಭೆ, ಶಕ್ತಿ, ಸಾಮರ್ಥ್ಯಗಳು ಒಂದೇ ಮಟ್ಟದಲ್ಲಿರದೆ ಬೇರೆಬೇರೆಯಾಗಿವೆ ಎಂಬುದನ್ನು ಒಪ್ಪಿಕೊಂಡು ಸೌಹಾರ್ದ, ಸಂತೋಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು. ಇಂಗ್ಲಿಷ್, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಪ್ರಥಮ ಭಾಷೆ ಹೀಗೆ ಐದು ವಿಭಿನ್ನ ವಿಷಯ, ಶಿಸ್ತುಗಳಿಗೆ ಸೇರಿದ ಐವರು ಶಿಕ್ಷಕರು ವಿಭಿನ್ನ ಅನುಭವ, ವಿಭಿನ್ನ ವಿದ್ಯಾರ್ಹತೆಗಳು ಮತ್ತು ಬೋಧನಾ ಸಾಮರ್ಥ್ಯಗಳೊಂದಿಗೆ ಒಂದೇ ಮಟ್ಟದ ಬದ್ಧತೆಯನ್ನು ಹೊಂದಿದ್ದು ಒಗ್ಗಟ್ಟಾಗಿದ್ದರು. ಯಾವುದೇ ವೃತ್ತಿಯಲ್ಲಿ, ಯಾವುದೇ ತಂಡಕ್ಕೆ ಇದೊಂದು ಅಮೂಲ್ಯವಾದ ಪಾಠವೇ ಸರಿ.

ರಾಷ್ಟ್ರೀಯ ಮಾನವ ಸಂಪನ್ಮೂಲ ಅಭಿವೃದ್ಧಿ (ಮಾನವ ಸಂಪನ್ಮೂಲ ವೃತ್ತಿನಿರತರ ಉನ್ನತ ಸಂಸ್ಥೆ)ಯ ಪತ್ರಿಕೆಗೆ ಬರೆಯುತ್ತಾ ನಾನು ಈ ಪ್ರಕ್ರಿಯೆಯನ್ನು ಬಹಳಷ್ಟು ಚರ್ಚೆಗೂ ಸಂಶೋಧನೆಗೂ ಒಳಗಾದ 'ಪಿಗ್‌ಮೇಲಿಯನ್ ಪರಿಣಾಮ' (Pygmalion effect)ದ ಒಂದು ರೂಪ ಎಂದು ಕರೆದಿದ್ದೆ. ಈ ಶಿಕ್ಷಕರು ತಮ್ಮ ಕುರಿತಾದ ನಿರೀಕ್ಷೆಯ ಮಟ್ಟವನ್ನು ತಾವೇ ಎತ್ತರಿಸಿಕೊಂಡು, ಅದರಾಚೆಗೆ ಜಿಗಿಯಲು ಯತ್ನಿಸುತ್ತಿರುವುದರ ಹಿಂದೆ ಇಂಥ ಒಂದು ವಿದ್ಯಮಾನವಿದೆ ಎಂದು ನಾನು ವಾದಿಸಿದ್ದೆ. 'ಪಿಗ್‌ಮೇಲಿಯನ್ ಪರಿಣಾಮ'ಕ್ಕೆ ಪ್ರಚೋದನೆ ಎಲ್ಲ ಕಡೆಯಿಂದ ಬರುತ್ತದೆ. ಕೆಲವೊಂದು ಮಾದರಿ ಶಾಲೆಗಳಲ್ಲಿ ದುಡಿಯುವ ಶಿಕ್ಷಕರಿಗೆ ಬಹಳ ದೊಡ್ಡ ಶಿಕ್ಷಕ ಸಮುದಾಯದ ನಡುವೆ 'ಇವರು ಉತ್ತಮರು' ಎಂದು ಆಯ್ಕೆಯಾಗಿರುವುದೇ ಒಂದು ಪ್ರೇರಣೆ. ಇನ್ನು ಕೆಲವರಿಗೆ ಅತ್ಯಂತ ಹಿಂದುಳಿದ ಸಮುದಾಯಗಳಿಂದ ಬಂದ ವಿದ್ಯಾರ್ಥಿಗಳಿಗೆ ಕಲಿಸುವ ಅವಕಾಶ ತಮಗೆ ದೊರೆತಿದೆ, ಅವರ ಭವಿಷ್ಯ ತಮ್ಮ ಕೈಯಲ್ಲಿದೆ ಎಂಬುದೇ ಪ್ರೇರಣೆ. ಕೆಲವರಿಗೆ ಇನ್ನೊಂದು ರೀತಿಯ ನೈತಿಕ ಪ್ರೇರಣೆ ಇದ್ದು, ಅದನ್ನು ಒಬ್ಬ ಶಿಕ್ಷಕರು ಹೀಗೆ ಅಭಿವ್ಯಕ್ತಿಸಿದರು: "ನಮ್ಮ ಶಾಲೆಯು ಮೂಲ ಸೌಕರ್ಯ ಮತ್ತು ಶಿಕ್ಷಕರು ಎರಡೂ ದೃಷ್ಟಿಗಳಿಂದಲೂ, ಬೇರೆ ಶಾಲೆಗಳಿಗಿಂತ ಅತ್ಯುತ್ತಮ ಸಂಪನ್ಮೂಲಗಳನ್ನು ಹೊಂದಿದೆ, ಹೀಗಾಗಿ ನಮ್ಮ ಮಕ್ಕಳಿಗೆ ಸಾಧ್ಯವಾದಷ್ಟು ಅತ್ಯುತ್ತಮ ಶಿಕ್ಷಣವನ್ನು ಖಾತ್ರಿ ಪಡಿಸಬೇಕಾದದ್ದು ನಮ್ಮ ಕರ್ತವ್ಯ". ಆದ್ದರಿಂದ ನಾವು ಇಂಥ ತಂಡಗಳಿಂದ, 'ಕುಛ್ ಕರ್‌ಕೆ ದಿಖಾನಾ ಹೆ' (ಏನಾದರೂ ಮಾಡಿ ತೋರಿಸಬೇಕು) ಎಂಬ ಮಾತನ್ನು ಕೇಳಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ.

ಕೊನೆಗೂ ನಮ್ಮ ಕೆಲಸವೇ ಎಲ್ಲವನ್ನೂ ಹೇಳುತ್ತದೆ. ಇಂಥ ಕೆಲವೊಂದು ಶಾಲೆಗಳಲ್ಲಿ ಶಿಕ್ಷಕರು ತುಂಬಾ ಕಡಿಮೆ ಅವಧಿಯಲ್ಲಿ (ಇತರರಿಗೆ ಅದು ಹೆಚ್ಚಿನ ಕಾಲಾವಧಿಯನ್ನು ತೆಗೆದುಕೊಳ್ಳಬಹುದು) ಅನೇಕ ಕ್ರಿಯೆಗಳನ್ನು ಏಕಕಾಲಕ್ಕೆ ಜಾರಿಗೆ ತಂದಿದ್ದಾರೆ. ಶಾಲೆ ಮುಗಿದ ಮೇಲೂ ಸಾಕಷ್ಟು ಕಾಲ ಮಕ್ಕಳೊಂದಿಗೆ ಸಮಯ ಕಳೆಯುವುದು, ಕೆಲವೊಮ್ಮೆ ಭಾನುವಾರ ಅಥವಾ ರಜಾದಿನಗಳಲ್ಲೂ ಶಾಲೆಗೆ ಬರುವುದು, ಮನೆ ಮನೆಗೆ ಭೇಟಿ ನೀಡಿ ಪೋಷಕರನ್ನು ಸಂಪರ್ಕಿಸುವುದು, ತಮ್ಮದೇ ಹಣದಿಂದ ಸಾಮಗ್ರಿಗಳನ್ನು, ಸೌಲಭ್ಯಗಳನ್ನು ಒದಗಿಸುವುದು, ಜೊತೆಗೆ ತಮ್ಮ ವಿಷಯ ಜ್ಞಾನವನ್ನು ವೃದ್ಧಿಸಿಕೊಳ್ಳುವುದು – ಇಂಥ ಕ್ರಮಗಳು ಇವುಗಳಲ್ಲಿ ಪ್ರಮುಖವಾದುವುಗಳು. ಪ್ರತಿಯೊಂದು ಮಗುವಿನ ಸಾಧನೆಯ ವರದಿಯನ್ನು ಇಟ್ಟುಕೊಳ್ಳುವ ಮೂಲಕ ಮಗುವಿನ ಪ್ರಗತಿಯ ಮೇಲೆ ನಿಗಾವಹಿಸುವುದು ಸಹ ಇಂತಹ ಒಂದು ರಚನಾತ್ಮಕ ಕ್ರಮವಾಗಿದೆ. ಅಗತ್ಯವಿರುವ ಮಕ್ಕಳಿಗೆ ವಿಶೇಷ ಗಮನ ಹರಿಸುವುದು ಮತ್ತು ಅಗತ್ಯ ಬೆಂಬಲ ನೀಡುವುದು, ಪ್ರತಿಭಾವಂತ ಮಕ್ಕಳನ್ನು ನವೋದಯ ಶಾಲೆಯ ಪ್ರವೇಶ ಪರೀಕ್ಷೆಗೆ, 'ಗಣಿತ ಮಾಂತ್ರಿಕ' ಮುಂತಾದ ಸ್ಪರ್ಧೆಗಳಿಗೆ ತಯಾರು ಮಾಡಲು ಪ್ರತ್ಯೇಕ ವೇಳಾಪಟ್ಟಿಯನ್ನು, ಯೋಜನೆಯನ್ನು ಹಾಕಿಕೊಳ್ಳುವುದು ಮುಂತಾದವೂ ಈ ಕ್ರಮಗಳಲ್ಲಿ ಸೇರುತ್ತವೆ. ಈ ಶಿಕ್ಷಕರು ಮಹತ್ವಾಕಾಂಕ್ಷೆಯಿಂದಲೂ

ಉತ್ಸಾಹದಿಂದಲೂ ತುಂಬಿ ತುಳುಕುತ್ತಿದ್ದರು. ಇಡೀ ಪ್ರದೇಶದಲ್ಲಿಯೇ ತಮ್ಮದು ಅತ್ಯುತ್ತಮ ಶಾಲೆ ಆಗಬೇಕೆಂಬ ಹಂಬಲ ಅವರಲ್ಲಿ ತುಂಬಿತ್ತು. ಶಾಲೆಗೆ ಬೇಗ ಬರುವ ಉತ್ಸುಕತೆ ಅವರಲ್ಲಿ ಇರುತ್ತಿತ್ತು, ಆದರೆ ವಾಪಸ್ ಹೋಗುವುದು ತಡವಾದರೆ ಬೇಸರವಿರುತ್ತಿರಲಿಲ್ಲ. ಹೀಗಾಗಿ ತೀರಾ ದುರ್ಗಮ ಪ್ರದೇಶಗಳಾದ ಕೂಡಲಗಿ, ವೀರ್‌ಪುರ್ ಕುರಾಹ ಮುಂತಾದ ಕಡೆ ಶಿಕ್ಷಕರು "ನಮಗೆ ಯಾವುದೂ ಹೊರೆಯಲ್ಲ, ನಮಗೆಲ್ಲ ಒಂದು ಸಮಾನ ಧ್ಯೇಯವಿದೆ" ಎಂದಾಗ ನಮಗದು ಕೃತಕವೆಂದು ಅನಿಸಲಿಲ್ಲ.

ಇದರಲ್ಲಿ ಕೊನೇಪಕ್ಷ ಒಂದೆರಡು ಶಾಲೆಗಳಲ್ಲಿ ನೈಜವಾದ ಅರ್ಥದಲ್ಲಿ ಮುಖ್ಯೋಪಾಧ್ಯಾಯರು ಇರಲೇ ಇಲ್ಲ ಎನ್ನಬಹುದು. ಒಂದೋ ಅವರು ಹೆಸರಿಗೆ ಮಾತ್ರವೇ ಎಂಬಂತೆ ಉತ್ಸಾಹ ಬತ್ತಿದ ವ್ಯಕ್ತಿಯಾಗಿದ್ದರು ಇಲ್ಲವೇ ಕಾಯಿಲೆ ಪೀಡಿತರಾಗಿದ್ದರು. ಆದರೆ ಉಳಿದ ಶಿಕ್ಷಕರು ಯಾವ ಬೇಸರವೂ ಇಲ್ಲದೆ ಶಾಲೆಯ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತು ನಡೆದಿದ್ದರು; ಇದರಿಂದ ಅನಿವಾರ್ಯವಾಗಿ, ಇತರ ಶಿಕ್ಷಕರಲ್ಲಿ ಸಾಮರ್ಥ್ಯಗಳೂ ಆಲೋಚನೆಗಳೂ ಬದ್ಧತೆಯೂ ಇರುವವರು ವಸ್ತುಶಃ ನಾಯಕರಾಗಿ ಹೊರಹೊಮ್ಮುತ್ತಿದ್ದರು; ಇತರರು ತಾವಾಗಿಯೇ ಅವರನ್ನು ಒಪ್ಪಿಕೊಂಡು ಬೆಂಬಲಿಸುತ್ತಿದ್ದರು.

ತಂಡಕಾರ್ಯದ ಏಕೋಭಾವದ ಕುತೂಹಲಕಾರಿಯಾದ ಒಂದು ವಿಷಯವನ್ನು ನಾನಿಲ್ಲಿ ಹಂಚಿಕೊಳ್ಳಬೇಕು. ಇಂತಹ ಏಕೋಭಾವದ ಬಾಂಧವ್ಯವಿರುವ ಅನೇಕ ಶಾಲೆಗಳಲ್ಲಿ ನಾವು ಶಿಕ್ಷಕರಿಗೆ, ನಿಮ್ಮ ಬಗ್ಗೆ ನೀವೇ ಏನಾದರು ಹೇಳಿ ಎಂದಾಗ ಅವರ ಸಹೋದ್ಯೋಗಿಗಳು ಇವರ ಬಗ್ಗೆ ಮಾಹಿತಿ ಕೊಡಲು ಆರಂಭಿಸುತ್ತಿದ್ದರು. ಈ ಪ್ರಕ್ರಿಯೆಯು ಅಲ್ಲಿ ಪರಸ್ಪರರ ಸಾಮರ್ಥ್ಯ, ಸಾಧನೆಗಳ ಬಗೆಗೆ ಹೆಮ್ಮೆಪಡುವ ಚರ್ಚೆಯಾಗಿ ಮಾರ್ಪಡುತ್ತಿತ್ತು. ಇಂಥದೊಂದು ಶಾಲೆಯಲ್ಲಿನ ವಿಜ್ಞಾನದ ಒಬ್ಬ ಶಿಕ್ಷಕಿಯು ಮಕ್ಕಳನ್ನು ರಾಷ್ಟ್ರೀಯ ಬಾಲ ವಿಜ್ಞಾನ ಕಾಂಗ್ರೆಸ್‌ಗೆ ತಯಾರು ಮಾಡುತ್ತಿದ್ದರು. ಆಕೆ ವಿಷಯದಲ್ಲಿ ಪರಿಣತರಾಗಿದ್ದರೂ ಕೆಲಸಕ್ಕೆ ಹೊಸಬರಾಗಿದ್ದರು; ಅವರಿಗೆ ಸರ್ಕಾರಿ ಶಾಲೆಯ ವಾತಾವರಣದ ಬಗ್ಗೆ ಹೆಚ್ಚೇನೂ ತಿಳಿದಿರಲಿಲ್ಲ. ಹೀಗಾಗಿ ಅವರಿಗೆ ಇಪ್ಪತ್ತು ವರ್ಷ ಸರ್ಕಾರಿ ಶಾಲೆಗಳಲ್ಲಿ ದುಡಿದಿದ್ದ ಒಬ್ಬ ಹಿಂದಿ ಶಿಕ್ಷಕರು ಸಹಾಯಹಸ್ತ ಚಾಚಿದರು. ತಾವು ಹಿಂದೆ ಕೆಲಸ ಮಾಡಿದ ಶಾಲೆಯಲ್ಲಿನ ವಿಜ್ಞಾನ ಶಿಕ್ಷಕರ ಕೆಲಸವನ್ನು ಸೂಕ್ಷ್ಮವಾಗಿ ಗಮನಿಸಿ ತಿಳಿದುಕೊಂಡಿದ್ದ ಅವರು ಈ ಶಿಕ್ಷಕಿಗೆ ವಿಜ್ಞಾನದ ಪ್ರಾಜೆಕ್ಟ್ ತಯಾರಿ ಸಂಬಂಧವಾಗಿ ಒಳನೋಟಗಳನ್ನು ನೀಡಿದರು. ಈ ಸಹಾಯಕ್ಕೆ ಕೃತಜ್ಞರಾದ ಕಿರಿಯ ಶಿಕ್ಷಕಿಯು ನಮ್ಮೊಂದಿಗೆ ಮಾತನಾಡುವಾಗ ಈ ವಿಷಯವನ್ನು ತಿಳಿಸಿ ಈ ಶಾಲೆಯಲ್ಲಿನ 'ವಿಜ್ಞಾನದ ಕಲಿಕೆಗೆ ಹಿಂದಿ ಶಿಕ್ಷಕರ ಕೊಡುಗೆ ದೊಡ್ಡದು' ಎಂದರು. ನಾನು ಒಮ್ಮೆ ಹಿಂದಿ ಶಿಕ್ಷಕರತ್ತ ಓರೆನೋಟವನ್ನು ಹರಿಸಿದಾಗ ಆತ ಆ ಉತ್ತರಕಾಶಿಯ ಚಳಿಗಾಲದ ಇಳಿಬಿಸಿಲಿನಲ್ಲಿ ನಾಚಿ ಕೆಂಪಾಗಿದ್ದರು.

ಹಿಂದಿನ ವಿಭಾಗಗಳಲ್ಲಿ ಹೇಳಿದ ಅನೇಕ ಗುಣವಿಶೇಷಗಳನ್ನು ಈ ವಿಭಾಗವು

ಬಹುಶಃ ಒಂದು ಮೊತ್ತವಾಗಿ ಕ್ರೋಡೀಕರಿಸಿ ನಿಮ್ಮ ಮುಂದೆ ಮಂಡಿಸುತ್ತದೆ. ಜೊತೆಗೆ ಆ ಗುಣವಿಶೇಷಗಳೆಲ್ಲವೂ ಒಂದು ಶಕ್ತಿಯಾಗಿ ಇಲ್ಲಿನ ಕಥನಗಳಲ್ಲಿ ಹೊರಹೊಮ್ಮುತ್ತವೆ. ಏಕೋಭಾವದ ಶಿಕ್ಷಕರ ಪರಿಶ್ರಮದ ಈ ಕಥೆಗಳು ವಿಭಿನ್ನ ಹಿನ್ನೆಲೆಯಿಂದ ಬಂದವರ ವೃತ್ತಿಜೀವನದ ಇತಿವೃತ್ತಗಳಾಗಿವೆ. ಇವುಗಳಲ್ಲಿ ಕೆಲವು ಅತ್ಯುತ್ತಮ ಸೌಲಭ್ಯಗಳಿದ್ದ ಮಾದರಿ ಶಾಲೆಗಳಿಗೆ ಸಂಬಂಧಿಸಿದ್ದಾದರೆ, ಇನ್ನು ಕೆಲವು ಸ್ಥಳೀಯ ರಾಜಕೀಯದಿಂದ ಕೆಟ್ಟುಹೋದ ಸಾಧಾರಣ ಶಾಲೆಗಳದ್ದಾಗಿವೆ. ನಾನು ಈ ಭಾಗದಲ್ಲಿ ಮಂಡಿಸುತ್ತಿರುವ ತಂಡಗಳಿಗೆ ಹೊರಗಿನಿಂದ ಉಸ್ತುವಾರಿಯಾಗಲಿ, ಪ್ರೇರಣೆಯಾಗಲಿ ಅಗತ್ಯವಿಲ್ಲ. ಅವರು ತಮ್ಮ ಕುರಿತಾದ ನಿರೀಕ್ಷೆಗಳನ್ನು ತಮಗೆ ತಾವೇ ಮರು ನಿಷ್ಕರ್ಷೆ ಮಾಡಿಕೊಂಡವರು. ತಮ್ಮ ಆ ಸಾಧನೆಯ ಉನ್ನತಿಯ ನೆಲೆಗಿಂತ ಕೆಳಗಿನದಾದ ಯಾವುದೇ ಸ್ಥಾನಕ್ಕೂ ಅವರು ಸಿದ್ಧರಿರಲಿಲ್ಲ. ಈ ಪ್ರಕ್ರಿಯೆಯಲ್ಲಿ ಅವರು ತಮ್ಮನ್ನೇ ಮತ್ತೆಮತ್ತೆ ಪರಿಷ್ಕರಣಕ್ಕೆ ಒಳಪಡಿಸಿಕೊಂಡಿದ್ದು ಹೊಸ ವಿಷಯಗಳನ್ನು ಕಲಿತಿದ್ದಾರೆ. ವೃತ್ತಿಪರತೆಯಲ್ಲಿ ಪ್ರಗತಿಯನ್ನು ಕಾಣುವುದಲ್ಲದೆ ತಮ್ಮ ಸಂಕಲ್ಪವನ್ನು ನವೀಕರಿಸಿಕೊಂಡಿದ್ದಾರೆ. ವೃತ್ತಿವಲಯಗಳಲ್ಲಿ ಸಾಮಾನ್ಯವಾಗಿ, ಜನರು ಮನ್ನಣೆ, ಪ್ರಶಸ್ತಿಗಳ ಆಸೆಯಿಂದ ಕೆಲಸ ಮಾಡುವುದು ಸಹಜ. ಆದರೆ ಇಲ್ಲಿ, ಸರ್ಕಾರಿ ಶಾಲೆಗಳಲ್ಲಿ ಒಬ್ಬ ಶಿಕ್ಷಕರು ನಮಗೆ ಹೇಳಿದಂತೆ, "ನಾವು ಇದನ್ನೆಲ್ಲ ಮಾಡುತ್ತಿರುವುದು ಯಾರೋ ಹೇಳಿದ್ದಾರೆ ಎಂದೋ ಅಥವಾ ಯಾವುದೋ ಪ್ರಶಸ್ತಿಯ ನಿರೀಕ್ಷೆಯಿಂದಲೋ ಅಲ್ಲ."

ಇದು ಅಂತರಂಗದ ಕರೆ. ಇದನ್ನು ಬೇರೆ ಯಾರೂ ಕಾಣಲಾರರು, ಕೇಳಲಾರರು. ಈ ಕಾರಣಕ್ಕಾಗಿಯೆ ಈ ತಂಡಗಳು ಅಸಾಧಾರಣವಾದವುಗಳು.